**ಪಿಡಬ್ಲೂಃ 1** **ಸಿ.ಸಿ ನಂ. 788/2017**

ದಿನಾಂಕ 21-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ ಶ್ರೀ. ಟಿ.ವಿ.ವಿ. ಆರೋಪಿ ಪರ ವಕೀಲರಿಂದಃ-**

ಆರೋಪಿ ಏನು ಕೆಲಸ ಮಾಡುತ್ತಾರೆ ಎಂದರೇ ಅವರದ್ದು ಅಂಗಡಿ ಇದೆ , ಹಸು ಮೇಯಿಸುತ್ತಾರೆ ಎನ್ನುತ್ತಾರೆ. ಏನು ಅಂಗಡಿ ಎಂದರೆ ಚಿಲ್ಲರೆ ಅಂಗಡಿ ಎನ್ನುತ್ತಾರೆ. ಅದರ ಜೊತೆಗೆ ಅವರು ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಆರೋಪಿಗೆ ಮಾವಿನ ತೋಪು ಇದೆ ಎಂದರೆ ಸರಿ. ಆರೋಪಿ ಹಾಲಿನ ಡೈರಿಗೆ ಹಾಲು ಹಾಕುತ್ತಾರೆ ಎಂದರೆ ಸರಿ. ಆರೋಪಿಗೆ 15 ದಿನಕ್ಕೊಮ್ಮೆ ಹಾಲು ಹಾಕಿದ್ದಕ್ಕೆ ಹಣ ಬರುತ್ತದೆ ಎಂದರೆ ಸರಿ.

ಮಾವಿನ ತೋಪಿನ ಫಸಲಿನಿಂದ 2 ರಿಂದ 3 ಲಕ್ಷ ಹಣ ಬರುತ್ತದೆ ಎಂದರೆ ಸರಿಯಲ್ಲ. ನಂತರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚಿಲ್ಲರೆ ಅಂಗಡಿಯಿಂದ ತಿಂಗಳಿಗೆ 20-30 ಸಾವಿರ ಆದಾಯ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿ ಪರಿಚಯ ನನಗೆ ಶ್ರೀರಾಮಪ್ಪರವರಿಂದ ಆಗಿತ್ತು. ಅವರದ್ದು ಯಾವ ಊರು ಎಂದರೆ ದೊಡ್ಡಗಂಜೂರು ಎನ್ನುತ್ತಾರೆ. ಅಲ್ಲಿ ಅವರು ರೇಷನ ಅಂಗಡಿ ಹಾಕಿರುತ್ತಾರೆ ಎಂದರೆ ಸರಿ. ಅವರು ಮತ್ತು ನಾನು ಒಂದೇ ಕುಲಸ್ಥರು ಎಂದರೆ ಸರಿ. ಆರೋಪಿಯದ್ದು ವಕ್ಕಲಿಗರ ಜಾತಿ ಎಂದರೆ ಸರಿ. ಆರೋಪಿಯ ಪರಿಚಯ ಶ್ರೀರಾಮಪ್ಪ ರವರಿಂದ ಆಗಿತ್ತು ಎಂದು ನೋಟಿಸಿನ ಪ್ರತಿಯಲ್ಲಿ ಬರೆಯಿಸಿಲ್ಲ. ಆ ರೀತಿ ಬರೆಯಿಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನೀವು ನಿಮ್ಮ ದೂರಿನಲ್ಲಿ ಮತ್ತು ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ

ಎಷ್ಟು ವರ್ಷಗಳ ಹಿಂದೆ ಪರಿಚಯ ಆಗಿತ್ತು ಎಂದರೆ ಸಾಕ್ಷಿಯು 7-8 ವರ್ಷ ಎನ್ನುತ್ತಾರೆ. ನಿರ್ದಿಷ್ಟವಾದ ವರ್ಷ ಏನು ಎನಂದರೆ ಸಾಕ್ಷಿಯು 2015-2016 ಎನ್ನುತ್ತಾರೆ. ಆರೋಪಿಯ ಆದ ನಂತರ ನಾನು ಅವರೊಂದಿಗೆ ಹಣದ ವ್ಯವಹಾರ ಮಾಡಿಲ್ಲ ಎಂದರೆ ಸರಿ.

ದೊಡ್ಡಗಂಜೂರು ಶ್ರೀರಾಮಪ್ಪ ತನ್ನ ಅಂಗಡಿಯಲ್ಲಿ ಚೀಟಿ ವ್ಯವಹಾರ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಅವರ ಹತ್ತಿರ ಚೀಟಿ ಹಾಕಿಲ್ಲ. ನೀನು ಅವರ ಅಂಗಡಿಗೆ ಹೋಗುವುದು, ಬರುವುದು , ಮಾತನಾಡುವುದು , ಕುಳಿತುಕೊಳ್ಳುವುದು ಮಾಡುತ್ತೀರಾ ಎಂದರೆ ಸರಿ.

ನಿಮ್ಮ ನೋಟಿಸಿನಲ್ಲಿ ಯಾವ ರೀತಿ ನಿಮಗೆ ಆದಾಯ ಬಂದಿತ್ತು ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ವ್ಯವಸಾಯದಿಂದ ಬಂದಿದೆ ಎನ್ನುತ್ತಾರೆ. ಈ ರೀತಿ ನಾನು ಅದರಲ್ಲಿ ಬರೆಸಿರುತ್ತೇನೆ. ನಿಮ್ಮ ನೋಟಿಸಿನಲ್ಲಿ ಬರೆಸಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೋಟಿಸಿನಲ್ಲಿ ನಾನು ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ನೋಟಿಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನ್ಯಾಯಾಲಯಕ್ಕೆ ಕೊಟ್ಟಿರುವ ನೋಟಿಸಿನಲ್ಲಿ ನೀವು ಸಹಿ ಮಾಡಿಲ್ಲ ಎಂದರೆ ಸರಿ.

ಆರೋಪಿಗೆ ಹೊಸ ನೋಟು ಕೊಟ್ಟಿರುತ್ತೀರಾ ಅಥವಾ ಹಳೇ ನೊಟಾ ಎಂದರೆ ಸಾಕ್ಷಿಯು ಹಳೆ ನೋಟು ಎನ್ನುತ್ತಾರೆ. ಕೇಂದ್ರ ಸರ್ಕಾರ ದಿಃ 08.11.2016 ರಂದು ಹಳೆ ನೊಟುಗಳನ್ನು ಬ್ಯಾನ್ ಮಾಡಿ ಹೊಸ ನೋಟುಗಳನ್ನು ಜಾರಿಗೆ ತಂದಿದ್ದು ಆ ಮುಖಾಂತರ ಆ ನೋಟುಗಳನ್ನು ಬ್ಯಾಂಕಗೆ ಕೊಟ್ಟು ಹೊಸ 500 ಮತ್ತು 2000 ಮುಖ ಬೆಲೆಯ ನೋಟರುಗಳನ್ನು ಪಡೆದುಕೊಳ್ಳಬೇಕು ಎಂಬ ಆದೇಶ ಆಗಿತ್ತು ಎಂದರೆ ಸರಿ.

**ಪಿಡಬ್ಲೂ: 1** **ಸಿ.ಸಿ ನಂ. 788/2017**

**<u>ಮುಂದುವರೆದ ಪಾಟಿಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.</u>**

**<u>ಮರು ವಿಚಾರಣೆ ಇಲ್ಲ:</u>-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.